ಮೂಲ ದಾವಾ ಸಂಖ್ಯೆ 19/2016

ಡಿ ಡಬ್ಲ್ಯೂ-1

**(ದಿನಾಂಕ 06.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ M.A.M. ವಕೀಲರಿಂದಃ-**

ಓ ಎಸ್ ನಂಬರ 97/2014 ನ್ನು ವಾದಿ ಎ ಸಿ ಡಿ ಸಿ ಮತ್ತು ತಹಶೀಲ್ದಾರ ಮತ್ತು ಪುರಸಭೆ ಮುಖ್ಯಾಧಿಕಾರಿಗಳ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ಭಾಗಶಃ ಡಿಕ್ರಿ ಆಗಿತ್ತು ಎಂದರೆ ಸರಿಯಲ್ಲ. ಜಿಲ್ಲಾ ನ್ಯಾಯಾಲಯದಲಿ ಮೇಲ್ಮನವಿ ಸಂಖ್ಯೆ 5076/2020 ದಾಖಲಿಸಿದ್ದು ಅದು ವಿಚಾರಣ ಹಂತದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲಾ. ಈ ದಾವೆ 2016 ರಿಂದಲೇ ಬಾಕಿ ಇದೆ ಎಂದರೆ ಸರಿ. ಓ ಎಸ್ ನಂಬರ 97/2014 ಮತ್ತು ಈ ದಾವೆ ಚಾಲ್ತಿಯಲ್ಲ ಇದ್ದಾಗಲೇ ಎ ಸಿ ರವರು ಎಲ್ ಎನ್ ಡಿ ನಂಬರ 2/2022-23 ರಂತೆ ಆದೇಶ ಮಾಡಿರುತ್ತಾರೆ ಎಂದರೆ  ನನಗೆ ಗೊತ್ತಿಲ್ಲಾ. ನಿ ಡಿ 8 ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹೀಗಾಗಿ ಸದರಿ ಆದೇಶ ವಾದಿಯರಿಗೆ ಬಂಧನಕಾರಿ ಅಲ್ಲಾ ಎಂದರೆ ಸರಿಯಲ್ಲ. ವಾದಿಯರು ಯಾವ ಸರ್ವೆ ನಂಬರ ನಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದರೆ ಸರ್ವೆ ನಂಬರ 739 ರಲ್ಲಿ ಒತ್ತುವರಿ ಮಾಡಿರುತ್ತಾರೆ. ಸರ್ವೆ ನಂಬರ 739 ನಮ್ಮ ಹೆಸರಿನಲ್ಲಿ ಪ್ರಸ್ತುತ ಪಹಣಿ ಇಲ್ಲಾ ಎಂದರೆ ಸರಿಯಲ್ಲ. ಅದು ನಿಯಂತ್ರಣಾಧಿಕಾರಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೆಸರಿನಲ್ಲಿ ಪ್ರಸ್ತುತ ಪಹಣಿ ಇದೆ ಎಂದರೆ ನನಗೆ ಗೊತ್ತಿಲ್ಲಾ. ಸರ್ವೆ ದಾವಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದಿಯರು ಯಾವುದೇ ಆಸ್ತಿ ಒತ್ತುವರಿ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ವಾದಿಯರ ಆಸ್ತಿಯನ್ನು ಕಬಳಿಸುವ ದುರುದ್ದೇಶ ದಿಂದ ಅವರಿಗೆ ತೊಂದರೆ ಕೊಡಲು ಎ ಸಿ ಡಿ ಸಿ ಮತ್ತು ತಹಶೀಲ್ದಾರ ಮತ್ತು ಪುರಸಭೆ ಮುಖ್ಯಾಧಿಕಾರಿ, ಲೋಕಾಯುಕ್ತ ರವರಿಗೆ ದೂರು ಕೊಟ್ಟಿದ್ದು ಈ ಕಾರಣ ದಿಂದ ವಾದಿಯರು ದಾವಾ

ಹೂಡಬೇಕಾಯಿತು ಎಂದರೆ ಸರಿಯಲ್ಲ. ವಾದಿಯರ ವಿರುದ್ಧ ನಾನು ಎ ಸಿ ಡಿ ಸಿ ಮತ್ತು ತಹಶೀಲ್ದಾರ ಮತ್ತು ಪುರಸಭೆ ಮುಖ್ಯಾಧಿಕಾರಿಗಳಿಗೆ ನಾನು ಮನವಿ ಕೊಟ್ಟಿದ್ದೆ ಅವರು ವಾದಿಯರನ್ನು ತೆರವುಗೊಳಿಸಿರುತ್ತಾರೆ. ತೆರವುಗೊಳಿಸಿದ ದಿನಾಂಕ ನನಗೆ ಗೊತ್ತಿಲ್ಲಾ. ಎ ಸಿ ಡಿ ಸಿ ಮತ್ತು ತಹಶೀಲ್ದಾರ ಮತ್ತು ಪುರಸಭೆ ಮುಖ್ಯಾಧಿಕಾರಿಗಳ ವಾದಿಯರನ್ನು ತೆರವುಗೊಳಿಸಿದಿದ್ದರೆ ಪುನಃ ನೋಟೀಸು ಕೊಡುವ ಪ್ರಮೆಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ನೋಟೀಸು ಕೊಟ್ಟ ಕಾರಣ ಧಾರವಾಡ ಪೀಠ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಡಬ್ಲೂಪಿ ನಂಬರ 107748/2023 ದಾಖಲಿಸಿದ್ದು ತಡೆ ಆಜ್ಞೆ ಪಡೆದಿದ್ದು ಅದು ಇಲ್ಲಿಯವರೆಗೆ ಊರ್ಜಿತವಾಗಿದೆ ಎಂದರೆ ಸರಿಯಲ್ಲ. ದೇವಸ್ಥಾನದ ಸಮಿತಿಯವರು ಅವಶ್ಯಕ ಪಕ್ಷಗಾರರಿರುತ್ತಾರೆ. ದೇವಸ್ಥಾನದ ಸಮಿತಿಯವರನ್ನು ಈಗಾಗಲೇ ಸೇರಿಸಲಾಗಿದೆ ಎಂದರೆ ಸರಿಯಲ್ಲ. ತಹಶೀಲ್ದಾರ ಡಿ ಸಿ ಪುರಸಭೆ ಮುಖ್ಯಾಧಿಕಾರಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ಬೇಲ್ದಾರ ಲಕ್ಷ್ಮಯ್ಯನಿಗೆ ಪಟ್ಟಾ ಕೊಟ್ಟಿರುತ್ತಾರೆ ಆ ಪ್ರಕಾರ ವಾದಿಯರು ಕ್ರಯ ಹೊಂದಿ ದಾವಾ ಆಸ್ತಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಅವರು ಸರ್ವೆ ನಂಬರ 539 ರಲ್ಲಿ ಇರುತ್ತಾರೆ. ಪುರಸಭೆಯಿಂದ ವಾದಿಯರಿಗೆ ಡೋರ್ ನಂಬರ ಕೊಟ್ಟಿರುತ್ತಾರೆ ಎಂದರೆ ಇರಬಹುದು ಆದರೆ ತೆರವುಗೊಳಿಸಿರುತ್ತಾರೆ. ವಾದಿಯರು ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ ಎಂದರೆ ತೆರವುಗೊಳಿಸಿರುತ್ತಾರೆ. ದಾವಾ ಆಸ್ತಿ ಯಲ್ಲಿ ವಾದಿಯ ಅನುಮತಿ ಮೇರೆಗೆ ಕಲೀಮುಲ್ಲಾ ಗುಜರಿ ಅಂಗಡಿ ಇದೆ ಎಂದರೆ ಸರಿಯಲ್ಲ. ಕಲೀಮುಲ್ಲಾ ಲೈಸೆನ್ಸ ಕೂಡ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ವಾದಿಯರ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.